INDIAN INSTITUTE OF ASTROPHYSICS

BANGALORE-560034

*Bicentennial year 1986*

**Professor Ramanath Cowsik**
*Director*

Phone : 5530672-76 (gen)
5530583 (per) 640626 (res)
Grams : ASTRON
Telex : 845-2763 IIAB IN

Fax # 80-5534019


Nov 23, 1993

Prof.B.V.Sreekantan
c/o Prof.Gaurang B.Yodh
Dept of Physics
University of California
Irvine, CA
USA

Dear Professor Sreekantan

I am extremely happy to inform you that the 35 acre land near Hoskote has been allotted to the IIA by the Govt of Karnataka. You might recall that we went to the site and you were enthusiastic about this piece of land for developing it as an academic campus. Following your advice and directive, I have actively pursued the matter and at present only a few formalities remain for final transfer of the land. I am enclosing a copy of the Government Order for your perusal.

The activities of the Institute have been going on in full swing and we are upgrading all our facilities. Substantial amount has been spent for acquiring new equipment. The strong budgetary requirements for these activities have been very generously supported by the DST and I must be particularly grateful to Dr P.Rama Rao, Secretary to the DST and Dr S.B.Krishnan, FA and Dr Ashok Harnal, Director, who is in charge of the IIA affairs.

These activities have induced a very urgent need to hold a meeting of the Council. I have therefore invited a meeting of the Council on your behalf on the 3rd December and I will be requesting Prof.Radakrishnan, Director, RRI to chair the meeting. Since Prof.Govind Swarup, Director, NCRA/TIFR is unable to attend the meeting, Prof.Radhakrishnan is the senior most scientist in the Council and I felt that it is appropriate he be the chairman of the meeting. I am confident that this arrangement meets with your approval.

On another matter, the arrangements for the ICNAPP at the Institute are going in full speed. I am extremely grateful to Prof.Gaurang Yodh for all that he has done to bring several senior American scientists to this conference. I would request you therefore to communicate to him my indebtedness.

Faxed on 23rd.

..2

In closing, I want to express my greetings to Gaurang, Ratnaben and Kavalben and express the hope that I will be seeing all of you here in Bangalore at the time of the meeting.

With my best regards,

Sincerely

Ramanath

R.Cowsik

Indian Institute of Astrophysics
Bangalore-560 034.
22 NOV 1993
Received on
9230

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹೊಸಕೋಟೆ ತಾಲ್ಲೂಕು ಕಸಬ ಹೋಬಳಿ, ಚಿಕ್ಕ ಹುಲ್ಲೂರು ಗ್ರಾಮದ ಸರ್ವೆ ನಂ.25 ರಲ್ಲಿ 35-00 ಎಕರೆ ಜಮೀನನ್ನು ಭಾರತೀಯ ನಕ್ಷತ್ರ ಭೌತಶಾಸ್ತ್ರ ಸಂಸ್ಥೆ (ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್) (ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಭಾರತ ಸರ್ಕಾರ) ಬೆಂಗಳೂರು ಇವರಿಗೆ ಸದರಿ ಸಂಸ್ಥೆಯನ್ನು ಸ್ಥಾಪಿಸುವುದಕ್ಕಾಗಿ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ: ಬೆಂಗಳೂರು ವಿಭಾಗಾಧಿಕಾರಿಗಳ ಪತ್ರ ಸಂಖ್ಯೆ ಎಲ್‌ಎನ್‌ಡಿ:(ಬ) ಸಿಆರ್ 12:92-93, ದಿನಾಂಕ 21-9-1993.

o o o

ಪ್ರಸ್ತಾವನೆ:

ನಿರ್ದೇಶಕರು, ಭಾರತೀಯ ನಕ್ಷತ್ರ ಭೌತಶಾಸ್ತ್ರ ಸಂಸ್ಥೆ (ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್) ಇವರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಕಸಬ ಹೋಬಳಿ, ಚಿಕ್ಕಹುಲ್ಲೂರು ಗ್ರಾಮದ ಸರ್ವೆ ನಂ.25 ರಲ್ಲಿ 35-00 ಎಕರೆ ಜಮೀನನ್ನು,ಸದರಿ ಸಂಸ್ಥೆಯನ್ನು ಸ್ಥಾಪಿಸುವುದಕ್ಕಾಗಿ, ಮಂಜೂರು ಮಾಡಬೇಕೆಂದು ಕೋರಿರುತ್ತಾರೆ. ಸದರಿ ಸಂಸ್ಥೆಯು ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಆಶ್ರಯದಲ್ಲಿ ಸ್ಥಾಪಿಸಲ್ಪಡುತ್ತಿದೆ. ಪ್ರಸ್ತಾವಿತ ಜಮೀನನ್ನು ಸದರಿ ಸಂಸ್ಥೆಯ ನಿರ್ದೇಶಕರು, ಸ್ಥಳೀಯ ಕಂದಾಯ ಅಧಿಕಾರಿಗಳೊಂದಿಗೆ, ಸ್ಥಳ ಪರಿಶೀಲನೆ ಮಾಡಿರುತ್ತಾರೆ. ಈ ಜಮೀನು ಸಂಸ್ಥೆಯನ್ನು ಸ್ಥಾಪಿಸುವುದಕ್ಕೆ ಸೂಕ್ತವಾಗಿದೆ ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಗಳು ವರದಿ ಮಾಡಿದ್ದಾರೆ. ಅವರ ವರದಿಯಂತೆ, ಚಿಕ್ಕಹುಲ್ಲೂರು ಗ್ರಾಮದ ಸರ್ವೆ ನಂ.25 ರಲ್ಲಿನ ಜಮೀನು ''ಗೋಮಾಳ'' ಎಂದು ವರ್ಗೀಕರಿಸಲಾಗಿದ್ದು, ಇದರಲ್ಲಿ 35-00 ಎಕರೆ ಜಮೀನನ್ನು ಸದರಿ ಸಂಸ್ಥೆಗೆ ಮಂಜೂರು ಮಾಡುವುದಕ್ಕಾಗಿ ಸ್ಪಷ್ಟವಾಗಿ ಲಭ್ಯವಿರುತ್ತದೆ. ಅದರಲ್ಲಿ 20-00 ಎಕರೆ ಪ್ರದೇಶದಲ್ಲಿ ಅರಣ್ಯ ಇಲಾಖೆಯವರು ನೀಲಗಿರಿ ಗಿಡಗಳನ್ನು ಬೆಳೆಸಿದ್ದು, ಅವುಗಳು ಸುಮಾರು ನಾಲ್ಕು ವರ್ಷಗಳ ವಯಸ್ಸಿನವುಗಳೆಂದು ವರದಿ ಮಾಡಲ್ಪಟ್ಟಿದೆ. ಪ್ರಸ್ತಾವಿತ ಜಮೀನಿಗೆ, ಎಕರೆ ಒಂದಕ್ಕೆ ರೂ.50,000-00 (ಐವತ್ತು ಸಾವಿರ ರೂಪಾಯಿಗಳು ಮಾತ್ರ) ಗಳಂತೆ ಬೆಲೆ ನಿಗಧಿಪಡಿಸಲಾಗಿದೆ.

ಭಾರತ ಸರ್ಕಾರದಿಂದ ಸ್ಥಾಪಿಸಲ್ಪಡುವ ನಕ್ಷತ್ರ ಭೌತಶಾಸ್ತ್ರ ಸಂಸ್ಥೆಯು, ಕರ್ನಾಟಕ ಭೂ ಮಂಜೂರಾತಿ ನಿಯಮಗಳ ಅಡಿಯಲ್ಲಿ ಯಾವುದೇ ವಿನಾಯಿತಿಗೆ ಅರ್ಹವಾಗಿರುವುದಿಲ್ಲ. ಆದುದರಿಂದ, ಸದರಿ ಸಂಸ್ಥೆಯು, ಎಕರೆ ಒಂದಕ್ಕೆ ರೂ.50,000-00 ಗಳಂತೆ ಜಮೀನಿನ ಬೆಲೆ ಮತ್ತು ನಿಯಮಾನುಸಾರ ಪರಿವರ್ತನಾ ಶುಲ್ಕ ಮತ್ತಿತರ ಶುಲ್ಕಗಳನ್ನು ಸಂದಾಯ ಮಾಡಬೇಕಾಗಿರುತ್ತದೆ.

ಗೋಮಾಳ ಜಮೀನನ್ನು ಸರ್ಕಾರಿ ಉದ್ದೇಶಕ್ಕಾಗಿ ಕರ್ನಾಟಕ ಭೂ ಕಂದಾಯ ನಿಯಮಗಳು, 1966 ರ ನಿಯಮ 97(4) ರನ್ವಯ, ನಿಗಧಿತ ಗೋಮಾಳದ ವಿಸ್ತೀರ್ಣವನ್ನು ಕಡಿಮೆಗೊಳಿಸಿ, ಮಂಜೂರು ಮಾಡಲು ಅವಕಾಶವಿದೆ. ಅಂತೆಯೇ ಇಂತಹ ಉದ್ದೇಶಕ್ಕಾಗಿ ಗೋಮಾಳ ಜಮೀನನ್ನು ಮಂಜೂರು ಮಾಡುವ ಬಗ್ಗೆ ಯಾವುದೇ ನಿಷೇಧವು ಇರುವುದಿಲ್ಲ.

...... 2

DIRECTOR

Director's Secretariat
No. 210 Dt 24/XI/93

ಸದರಿ ಸಂಸ್ಥೆಯು ಅರಣ್ಯ ಇಲಾಖೆಗೆ, ಈ ಜಮೀನಿನಲ್ಲಿನ 20–00 ಎಕರೆ ಪ್ರದೇಶದಲ್ಲಿ ಬೆಳೆಸಲ್ಪಟ್ಟಿರುವ ನೀಲಗಿರಿ ಗಿಡಗಳ ಬೆಲೆಯನ್ನು ಕೊಡಬೇಕಾಗಿರುತ್ತದೆ. ಸದರಿ ನೀಲಗಿರಿ ಗಿಡಗಳ ಬೆಲೆಯನ್ನು ಅರಣ್ಯ ಇಲಾಖೆಯು ನಿರ್ಧರಿಸುವುದು. ಪ್ರಸ್ತಾವಿತ ಭೂ ಮಂಜೂರಾತಿಯನ್ನು ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಗಳು ಮತ್ತು ಬೆಂಗಳೂರು ವಿಭಾಗಾಧಿಕಾರಿಗಳು ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರಿ ಆದೇಶ ಸಂಖ್ಯೆ : ಆರ್‌ಡಿ 34 ಎಲ್‌ಜಿಬಿ 93, ಬೆಂಗಳೂರು, ದಿನಾಂಕ: 16–11–1993

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಮತ್ತು ಮೇಲೆ ವಿವರಿಸಿದ ಹಿನ್ನೆಲೆಯಲ್ಲಿ ಭಾರತೀಯ ನಕ್ಷತ್ರ ಭೌತಶಾಸ್ತ್ರ ಸಂಸ್ಥೆ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಭಾರತ ಸರ್ಕಾರ, ಇದಕ್ಕೆ 35–00 ಎಕರೆ ಜಮೀನನ್ನು ಹೊಸಕೋಟೆ ತಾಲ್ಲೂಕು, ಕಸಬ ಹೋಬಳಿ, ಚಿಕ್ಕಹುಲ್ಲೂರು ಗ್ರಾಮದ ಸರ್ವೆ ನಂ.25 ರಲ್ಲಿ ಎಕರೆ ಒಂದಕ್ಕೆ ರೂ.50,000–00 ( ಐವತ್ತು ಸಾವಿರ ರೂಪಾಯಿಗಳು ಮಾತ್ರ) ಬೆಲೆಯನ್ನು ವಿಧಿಸಿ, ಜಮೀನಿನಲ್ಲಿ ಬೆಳೆದಿರುವ ನೀಲಗಿರಿ ಗಿಡಗಳ ಬೆಲೆಯನ್ನು ಕೊಡುವ ಷರತ್ತಿಗೆ ಒಳಪಟ್ಟು, ಮತ್ತು ಪರಿವರ್ತನಾ ಶುಲ್ಕ ಹಾಗೂ ಮತ್ತಿತರ ಶುಲ್ಕಗಳನ್ನು ನಿಯಮಾನುಸಾರ ಸಂದಾಯ ಮಾಡುವ ನಿಬಂಧನೆಯನ್ನು ವಿಧಿಸಿ, ಮಂಜೂರು ಮಾಡಲು ಸರ್ಕಾರವು ಅನುಮೋದನೆ ನೀಡಿದೆ.

ಕರ್ನಾಟಕ ಭೂ ಮಂಜೂರಾತಿ ನಿಯಮಗಳ ಪ್ರಕಾರ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಗಳು ಮುಂದಿನ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

( ಜೀತೇಂದ್ರ ಸಿಂಗ್ )
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ.

ಇವರಿಗೆ,

1) ಬೆಂಗಳೂರು ವಿಭಾಗಾಧಿಕಾರಿಗಳು, ಬೆಂಗಳೂರು ವಿಭಾಗ(ಸಂಬಧಪಟ್ಟ ಕಡತದೊಂದಿಗೆ)
2) ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.
3) ಸರ್ಕಾರದ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಪರಿಸ್ಥಿತಿ ಶಾಸ್ತ್ರ ಇಲಾಖೆ.
4) ನಿರ್ದೇಶಕರು, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್. ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಭಾರತ ಸರ್ಕಾರ, ಬೆಂಗಳೂರು.
5) ಅಧೀನ ಕಾರ್ಯದರ್ಶಿ, ಸಚಿವ ಸಂಪುಟ ವ್ಯವಹಾರಗಳ ಇಲಾಖೆ(ಸಚಿವ ಸಂಪುಟ) ವಿಧಾನ ಸೌಧ, ಬೆಂಗಳೂರು (ಉಲ್ಲೇಖ: ವಿಷಯ ಸಂಖ್ಯೆ: ಸಿ 6[illegible]7:93)
6) ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
7) ರಕ್ಷಾ ಕಡತ : ಹೆಚ್ಚುವರಿ ಪ್ರತಿಗಳು.